ಬಿಜಾಪುರ ನೂಲಿನ ಗಿರಣಿಯ ಪುನರ್ ಸ್ಥಾಪನೆ

೫೬೪. **ಶ್ರೀ ಮನೋಹರ ಐನಾಪೂರ** (ಬಳ್ಳೊಳ್ಳಿ).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೇ ?

ಅ) ಮುಚ್ಚಿದ ವಿಜಾಪುರ ಸಹಕಾರ ನೂಲಿನ ಗಿರಣಿಯನ್ನು ಪುನರಾರಂಭಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಆ) ಪುನರಾರಂಭ ಮಾಡದೆ ಇದ್ದರೆ ವಿಜಾಪುರ ಸಹಕಾರ ನೂಲಿನ ಗಿರಣಿಯ ನೂರಾರು ಕೆಲಸಗಾರರು ತಮ್ಮ ಕುಟುಂಬದೊಂದಿಗೆ ಉಪವಾಸದಿಂದ ಬಳಲುತ್ತಿದ್ದು, ಇವರ ಪುನರ್ ವಸತಿಗಾಗಿ ಯೋಜನೆ ಹಮ್ಮಿಕೊಳ್ಳಲಾಗಿದೆಯೇ ?

ಶ್ರೀ ಹೆಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).—

ಅ) ಈ ಗಿರಣಿಯನ್ನು ಗುತ್ತಿಗೆಗೆ ನೀಡಲು ನಿರ್ಧರಿಸಲಾಗಿದ್ದು, ಈ ನಿರ್ಧಾರವನ್ನು ಕಾರ್ಯಗತಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಮನೋಹರ ಐನಾಪುರ.— ಮಾನ್ಯ ಅಧ್ಯಕ್ಷರೇ. ನಾನು ಈಗಾಗಲೇ ಪ್ರಸ್ತಾಪಿಸಿರುವಂತೆ ಆ ನೂಲಿನ ಗಿರಣಿ ನೌಕರರು ಯಾವ ಕೆಲಸವೂ ಇಲ್ಲದೆ. ಬೀದಿಯಲ್ಲಿ ಅಲೆದಾಡುತ್ತಿದ್ದಾರೆ. ಅವರ ಹೆಂಡತಿ ಮಕ್ಕಳಿಗೆ ಸರಿಯಾದ ವ್ಯವಸ್ಥೆ ಇಲ್ಲದಂತಾಗಿದೆ. ಮಕ್ಕಳನ್ನು ಶಾಲೆಗೂ ಸಹಿತ ಕಳುಹಿಸುವುದನ್ನೂ ನಿಲ್ಲಿಸಿದ್ದಾರೆ. ಈ ನೂಲಿನ ಗಿರಣಿಗೆ ೪ ವರ್ಷದಿಂದ ಮುಚ್ಚಿದೆ. ಸರ್ಕಾರ ಈ ನೂಲಿನ ಗಿರಣಿಯನ್ನು ಪ್ರಾರಂಭಿಸಲು ಯಾವ ರೀತಿಯಾದ ಕ್ರಮವನ್ನು ಕೈಗೊಳ್ಳುತ್ತದೆ ಎಂದು ಕೇಳಿರುವ ಪ್ರಶ್ನೆಗೆ ''ಈ ಗಿರಣಿಯನ್ನು ಗುತ್ತಿಗೆಗೆ ನೀಡಲು ನಿರ್ಧರಿಸಲಾಗಿದ್ದು. ಈ ನಿರ್ಧಾರವನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ'' ಎಂದು ಉತ್ತರ ಕೊಟ್ಟಿದ್ದಾರೆ. ಟೆಂಡರ್ ಮುಖಾಂತರ ಎಷ್ಟರ ಮಟ್ಟಿಗೆ. ಮತ್ತು ಯಾವಾಗ ನಿರ್ದಿಷ್ಟವಾಗಿ ಪ್ರಾರಂಭ ಮಾಡುವುದಕ್ಕಾಗುತ್ತದೆ ಎಂಬುದನ್ನು ಸಚಿವರು ಹೇಳುತ್ತಾರೆಯೇ ?

ಡಾ॥ ಹೆಚ್. ಆರ್. ರಾಜು.—ಈ ಪ್ರಶ್ನೆಗೆ ನಾವು ಈಗಾಗಲೇ ತೀರ್ಮಾನ ತೆಗೆದುಕೊಂಡಿರುವ ಹಾಗೆ. ಟೆಂಡರ್ ಕರೆಯುವುದಕ್ಕೆ ಹೇಳಿದೆ. ಬಹುಶಃ ಆದಷ್ಟು ಬೇಗನೆ ಅಂದರೆ ಒಂದು ತಿಂಗಳೊಳಗೆ ಟೆಂಡರ್ ಕರೆಯುವುದಕ್ಕೆ ಸಂಬಂಧ ಪಟ್ಟವರಿಗೆ ಹೇಳುತ್ತೇನೆ.

ಶ್ರೀ ಮನೋಹರ ಐನಾಪುರ.— ಈ ನೂಲಿನ ಗಿರಣಿಯನ್ನು ಹೋದ ಸರ್ಕಾರವೂ ಸಹಿತ ಪ್ರಾರಂಭ ಮಾಡುವುದಕ್ಕೆ ಆಗಲಿಲ್ಲ ನಮ್ಮ ಸರ್ಕಾರ ಆದಷ್ಟು ಬೇಗನೆ ಪ್ರಾರಂಭ ಮಾಡಿ ಈ ನಿರ್ಗತಿಕರನ್ನು ಒಂದು ದಾರಿಗೆ ತರುತ್ತೀರೆಂದು ಭಾವಿಸುತ್ತೇನೆ ಮತ್ತು ಒಂದು ದಿನಾಂಕ ಹೇಳಿದರೆ ಒಳ್ಳೆಯದು.

ಡಾ॥ ಹೆಚ್. ಆರ್. ರಾಜು.— ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ದಿನಾಂಕ ಹೇಳುವುದು ಕಷ್ಟ ಆದಷ್ಟು ಬೇಗನೆ ಮಾಡುತ್ತೇವೆ.

ಶ್ರೀ ಸಿ. ಎಸ್. ನಾಡಗೌಡ:— ಈ ನೂಲಿನ ಗಿರಣಿಯನ್ನು ಖಾಸಗಿಯವರಿಗೆ ಕೊಡುತ್ತೇವೆಂಬ ಅರ್ಥ ಇಲ್ಲಿ ಕಂಡು ಬರುತ್ತಿದೆ. ಹಾಗಿದ್ದಲ್ಲಿ ಈಗ ಅಲ್ಲಿ ದುಡಿಯತಕ್ಕ ಎಂಪ್ಲಾಯೀಸ್ ಅಂದರೆ ರೀಲರ್ಸ್ ಏನಿದ್ದಾರೆ. ಕೂಲಿಕಾರರು ಏನಿದ್ದಾರೆ ಅವರಿಗೆ ಅಲ್ಲಿ ಪುನ: ಕೆಲಸದ ಆಸ್ಪದ ಇದೆಯೇ ಅಥವಾ ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ಕೊಟ್ಟ ಮೇಲೆ ಅವರು ತಮ್ಮದೇ ಆದ ಸಿಬ್ಬಂದಿಯನ್ನು ತೆಗೆದುಕೊಳ್ಳುತ್ತಾರೆ ಆದ್ದರಿಂದ ಇಲ್ಲಿ ಮೊದಲಿನಿಂದಲೂ ದುಡಿಯುವಂತ ಜನರಿಗೆ ಪುನರ್‌ವಸತಿ ಮಾಡುವಂತ ವಿಚಾರ ಮಾಡುತ್ತೀರಾ ಅಥವಾ ಅವರನ್ನೇ ಕೆಲಸದಲ್ಲಿ ಮುಂದುವರಿಸಿಕೊಂಡು ಹೋಗಬೇಕೆಂದು ಕಡ್ಡಾಯವಾಗಿ ಗುತ್ತಿಗೆದಾರರಿಗೆ ತಾವು ಅಪ್ಪಣೆ ಮಾಡುತ್ತೀರಾ ಎಂಬ ಬಗ್ಗೆ ಸ್ಪಷ್ಟೀಕರಣ ಮಾಡಬೇಕು.

ಅಧ್ಯಕ್ಷರು:—ತಾವು ಹೇಳಿದ್ದು ಸಚಿವರಿಗೆ ಕೇಳದೇ ಹೋದ ಪ್ರಯುಕ್ತ ಇಯರ್‌ಫೋನ್ ಹಾಕಿಕೊಂಡು ಪುನಃ ಪ್ರಶ್ನೆ ಕೇಳಿ.

ಶ್ರೀ ಸಿ. ಎಸ್. ನಾಡಗೌಡ:— ಈ ಮಿಲ್‌ನ್ನು ಖಾಸಗಿಯವರಿಗೆ ಕೊಟ್ಟ ತಕ್ಷಣ ಅವರು ಈಗಿರುವಂತಹ ಸಿಬ್ಬಂದಿ ಏನಿದೆ ಅವರನ್ನೂ ಬೇಕಾದರೆ ಮುಂದುವರಿಸಬಹುದು ಇಲ್ಲದಿದ್ದರೆ ಇಲ್ಲ. ಆದುದರಿಂದ ತಾವು ಪ್ರೈವೇಟ್‌ನವರು ಪರ್ಚೇಸ್ ಮಾಡಿದ ನಂತರ ಅಥವಾ ಲೀಸ್‌ಗೆ ತೆಗೆದುಕೊಂಡ

ನಂತರ ಈಗಿರತಕ್ಕಂಥ ಸಿಬ್ಬಂದಿಯನ್ನೇ ತೆಗೆದುಕೊಳ್ಳಬೇಕೆಂದು ಅವರನ್ನೇ ಪುನಃ ಮುಂದುವರಿಸಿಕೊಂಡು ಹೋಗಬೇಕೆಂದು ಕಡ್ಡಾಯವಾಗಿ ಕೆಲವೊಂದು ರಿಸ್ಟ್ರಕ್ಷನ್ ಹಾಕುತ್ತೀರಾ? ಅಥವಾ ಪ್ರೈವೇಟ್ ನವರು ಅವರಿಗೆ ಬೇಕಾದಂಥ ಸಿಬ್ಬಂದಿಯನ್ನು ಅವರೆ ಆರಿಸಿಕೊಳ್ಳಬಹುದಾ ?

ಶ್ರೀ ಕೆ. ಹೆಚ್. ಪಾಟೀಲ್.— ಸಹಕಾರ ರಾಜ್ಯ ಸಚಿವರ ಪರವಾಗಿ ಪ್ರೈವೇಟ್‌ನವರಿಗೆ ಕೊಡಬೇಕೆಂದು ಇನ್ನೂ ನಿರ್ಣಯ ಮಾಡಿಲ್ಲ ಟೆಂಡರ್ ಕರೆದಿದ್ದಾರೆ ಪ್ರಾಯಶ: ಇದರ ಪ್ರಾಮುಖ್ಯತೆಯನ್ನು ನೋಡಿಕೊಂಡು ಇದನ್ನು ಸಹಕಾರ ಸಂಘಕ್ಕೆ ಕೊಡಬೇಕೆಂದು ಮಾಡಿರುತ್ತೇವೆ. ಆದುದರಿಂದ ಈಗ ಈ ಪ್ರಶ್ನೆ ಉದ್ಭವ ಆಗುವುದಿಲ್ಲ.

ಶ್ರೀ ಸಿ. ಎಸ್. ನಾಡಗೌಡ.— ಟೆಂಡರ್ ಕರೆದಿರುತ್ತಾರೆಂದು ಹೇಳಿದ ಮೇಲೆ ಈ ಕೊಶ್ಚನ್ ಬಂದೇ ಬರುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಟೆಂಡರ್ ಹಾಕಿದ ನಂತರ ಆ ಮೇಲೆ ವಿಚಾರ ಮಾಡುತ್ತೇವೆ. ಈಗ ಸ್ಪಾಫ್‌ನವರು ಯಾರಿದ್ದಾರೆ ಅವರೂ ಕೂಡಿಯೇ ಹೋಗಬೇಕಾಗುತ್ತದೆ. ಸ್ಪಾಫ್‌ನವರನ್ನು ಮನೆಗೆ ಕಳುಹಿಸುವುದಿಲ್ಲ.

ಶ್ರೀ ಕೆ. ಹೆಚ್. ಕಾರಡಗಿ.— ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಖಾಸಗಿಯವರಿಗೆ ಕೊಡಬೇಕೆಂಬ ನಿರ್ಧಾರ ಸರಕಾರದ ದಿಸೆಯಲ್ಲಿ ಈಗಾಗಲೆ ಹೊರಟಿದೆ. ಆದ್ದರಿಂದ ಅವರಿಗೆ ಕೊಡುತ್ತೀರಿ ಎಂಬುದು ಖಚಿತವಾಯಿತು. ಇದು ಬಹಳ ಜಟಿಲವಾದ ಸಮಸ್ಯೆ. ನಾಲ್ಕು ವರ್ಷಗಳಿಂದ ಈ ಮಿಲ್ ಮುಚ್ಚಿದ್ದು ಬಹಳಷ್ಟು ಬಡ ನೌಕರರಿಗೆ ತಮ್ಮ ಹೆಂಡತಿ ಮಕ್ಕಳ ಜೊತೆ ರಸ್ತೆಯಲ್ಲಿ ಭಿಕ್ಷೆ ಬೇಡುವಂತಹ ಪರಿಸ್ಥಿತಿ ಉದ್ಭವವಾಗಿದೆ. ಮಾನ್ಯ ರಾಜೀವ್‌ಗಾಂಧಿಯವರು ಪ್ರಧಾನಿಮಂತ್ರಿಯಾಗಿದ್ದಾಗ ಬಿಜಾಪುರಕ್ಕೆ ಬಂದಿದ್ದಾಗ ಅವರಿಗೂ ತಿಳಿಸಿದ್ದೆವು. ಬಿಜಾಪುರ ಮತ್ತು ಬಾಗಲಕೋಟೆ ನೂಲಿನ ಗಿರಣಿಯನ್ನು ತೀವ್ರವಾಗಿ ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆಂದು ಅವರೂ ಕೂಡ ಹೇಳಿದ್ದರು. ಇದನ್ನು ಖಾಸಗಿಯವರಿಗೆ ಕೊಡಿರಿ ಅಥವಾ ಯಾವ ರೀತಿಯಿಂದಲಾದರೂ ಪ್ರಾರಂಭ ಮಾಡಿರಿ. ಮಾಡಿದ ಮೇಲೆ ಮಾನ್ಯ ಸದ್ಯಸರು ಹೇಳಿದ ಹಾಗೆ ಹಿಂದೆ ಇದ್ದ ನೌಕರರಿಗೇ ಪುನಃ ನೌಕರಿ ಕೊಡುವ ಕರಾರನ್ನು ಹಾಕಿ ಖಾಸಗಿಯವರಿಗೆ ಕೊಡುತ್ತೀರಾ ಎಂಬುದು ಮುಖ್ಯವಾದುದು. ಖಾಸಗಿಯವರಿಗೆ ಇದನ್ನು ಕೊಡುತ್ತೀರಿ ಎಂದಾದ ಮೇಲೆ ಈ ಪ್ರಶ್ನೆ ಬಂದೆ ಬರುತ್ತದೆ. ಆದ್ದರಿಂದ ಇದರ ಬಗ್ಗೆ ನಿಖರವಾದ ಉತ್ತರವನ್ನು ಮಾನ್ಯ ಸಚಿವರು ಹೇಳಲೇಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ರಾಜೀವಗಾಂಧಿಯವರು ಬಂದು ಹೇಳಿದ ನಂತರ ಏನಾಗಿದೆ. ಅದಾದನಂತರ ಮಾನ್ಯ ಎಂ. ಎಲ್. ಎ.ಗಳು ಎಂ. ಪಿ.ಗಳು ಏನು ಹೇಳಿದ್ದಾರೆ, ಅದೆಲ್ಲಾ ಸಂಗತಿ ಸರಕಾರದ ಗಮನದಲ್ಲಿದೆ. ಸರಕಾರದವರು ಸಹ ಯಾವ ನೌಕರದಾರರಿಗೂ ತೊಂದರೆ ಮಾಡಬಾರದು ಎಂಬ ಅಭಿಲಾಷೆ ಉಳ್ಳವರಾಗಿದ್ದಾರೆ. ಆರ್ಥಿಕ ಪರಿಸ್ಥಿತಿಗನುಗುಣವಾಗಿ ಪಂತ್ತು ಆ ಸಂಘದಲ್ಲಿ ನಡೆದ ನಡವಳಿಕೆಗನುಗುಣವಾಗಿ ತಡವಾದುದಕ್ಕಾಗಿ ನಾವು ವಿಷಾದ ಪಡುತ್ತೇವೆ. ಇದರ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳಲು ಒಂದು ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿದ್ದಾರೆ. ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ ತೀವ್ರವಾಗಿ ಟೆಂಡರ ಕರೆದು. ಟೆಂಡರ್ ಪರಿಶೀಲನೆ ಕೆಲಸವನ್ನು ಆದಷ್ಟು ಬೇಗನೆ ಮಾಡಬೇಕೆಂದು ಆದೇಶ ಕೊಟ್ಟಿದ್ದಾರೆ. ನಂತರ ಎಲ್ಲಾ ಎಂ.ಎಲ್.ಎ. ಗಳಿಗೂ ಸಮಾಧಾನವಾಗುವ ರೀತಿಯಲ್ಲಿ ಇದನ್ನು ಚಾಲೂ ಮಾಡುವ ಇಚ್ಛೆ ಸರಕಾರಕ್ಕೆ ಇದೆ.

ಅಧ್ಯಕ್ಷರು:— ಪ್ರಶ್ನೆ ೨೩೪ ಶ್ರೀ ಷಫಿ ಅಹಮದ್. ಸಚಿವರು ಇನ್ನೊಂದು ಹೌಸ್‌ಗೆ ಹೊಗಬೇಕಾಗಿದೆ. ಆದುದರಿಂದ ಇದನ್ನು ಬೇಗ ತೆಗೆದುಕೊಳ್ಳುತ್ತೇನೆ.

ಶ್ರೀ ಷಫಿ ಅಹಮದ್.—ಇದು ಟ್ರಾನ್ಸ್‌ಫರ್‌ಗೆ ಆಗಿದೆ.

ಪ್ರಶ್ನೆ ೨೩೬(೬೭೩) **ಶ್ರೀ ಕೆ. ಹೆಚ್.** ಹನುಮೇಗೌಡ

(ಮಾನ್ಯ ಸದಸ್ಯರು ಗೈರು ಹಾಜರಿದ್ದರು)

ಕರ್ನಾಟಕ ತುಂಡು ಭೂಮಿ ಕಾಯ್ದೆಯ ಬಗ್ಗೆ

***೬೭೩. ಶ್ರೀ ಎಂ. ಮಹದೇವ (ನಂಜನಗೂಡು).**— ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ತುಂಡು ಭೂಮಿ ಕಾಯ್ದೆಯಿಂದ ಸಣ್ಣ ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?